ಸೆಲೆಬ್ರಿಟಿ

■ ಹನಿ



## ಅಬ್ ಕಿ ಬಾರ್– ಗುಲ್ಜಾರ್!

ಸಂಪೂರಣ್ ಸಿಂಗ್ ಕಾಲ್ರಾ ಎನ್ನುವ ಮೂಲ ಹೆಸರು ಬಹುತೇಕ ಎಲ್ಲರಿಗೂ ಮರೆತೇ ಹೋಗಿದೆ. ಅವರೇನಿದ್ದರೂ ಗುಲ್ಜಾರ್. ಈ ಮೂರಕ್ಷರ ಇಡೀ ಬಾಲಿವುಡ್‌ಗೇ ಮೋಡಿ ಹಾಕಿದೆ. ಉರ್ದು, ಹಿಂದಿ ಸಾಹಿತ್ಯ ಬಲ್ಲ ಕಾವ್ಯಪ್ರೇಮಿಗಳಿಗಂತೂ ಗುಲ್ಜಾರ್ ಎಂದರೆ ಪಂಚಪ್ರಾಣ. ಕವಿ, ಚಿತ್ರ–ಸಾಹಿತಿ, ನಿರ್ಮಾಪಕ, ಚಿತ್ರಕಥೆಗಾರ, ನಿರ್ದೇಶಕ– ಹೀಗೆ ಎಲ್ಲವೂ ಆಗಿ ಅಪಾರ ಅಭಿಮಾನಿಗಳನ್ನು ಹೊಂದಿರುವ ಗುಲ್ಜಾರ್‌ಗೆ 2013ನೇ ಸಾಲಿನ ಪ್ರತಿಷ್ಠಿತ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ ಸಿಕ್ಕಿದೆ. ತುರ್ತುಪರಿಸ್ಥಿತಿಯ ಸಮಯದಲ್ಲಿ ಗುಲ್ಜಾರ್ ನಿರ್ದೇಶಿಸಿದ 'ಆಂಧಿ' ಚಿತ್ರಕ್ಕೆ ಆಗಿನ ಕಾಂಗ್ರೆಸ್ ಸರಕಾರ 'ನಿಷೇಧ' ಹೇರಿತ್ತು. ಸುಚಿತ್ರಾ ಸೇನ್ ಮಾಡಿದ ಪಾತ್ರ ಇಂದಿರಾ ಗಾಂಧಿಯನ್ನು ಹೋಲುತ್ತಿದೆ ಎನ್ನುವುದು ಆಗಿನ ಸರಕಾರದ ಆಕ್ಷೇಪ–ವಾಗಿತ್ತು. ಈಗ ಅದೇ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಗುಲ್ಜಾರ್‌ರಿಗೆ ಚಿತ್ರರಂಗಕ್ಕೆ ನೀಡಿದ ಮಹಾನ್ ಕೊಡುಗೆಗಾಗಿ 'ಫಾಲ್ಕೆ' ನೀಡಿದೆ.

ಸದಾ ಬಿಳೀ ಬಣ್ಣದ ಜುಬ್ಬಾ ಮತ್ತು ಕುರ್ತಾ ಧರಿಸುವ ಗುಲ್ಜಾರ್ ಮಿತಭಾಷಿ. ಆದರೆ ಮುಷಾಯಿರಾಗಳಲ್ಲಿ ಅವರ ಈ ಮಿತಭಾಷೆಯನ್ನು ಕೇಳಲು ಕುಳಿತವರು ಮೈಮರೆಯುತ್ತಾರೆ. ಈಗಿನ ಪಾಕಿಸ್ತಾನದಲ್ಲಿರುವ ಪಂಜಾಬ್ ಪ್ರಾಂತ್ಯದಲ್ಲಿ ಜನಿಸಿದ ಗುಲ್ಜಾರ್ (ಬರ್ತ್‌ಡೇ 18/8/1936) ಇವತ್ತು ಭಾರತ, ಪಾಕಿಸ್ತಾನ, ಬ್ರಿಟನ್, ಅಮೆರಿಕ ಮುಂತಾಗಿ ಬಹುತೇಕ ದೇಶಗಳಲ್ಲಿ ಅಭಿಮಾನಿಗಳನ್ನು ಹೊಂದಿದ್ದಾರೆ. ಲಂಡನ್, ನ್ಯೂಯಾರ್ಕ್‌ಗಳಲ್ಲಿ ಅವರು ಟ್ಯಾಕ್ಸಿ ಹತ್ತಿದರೆ ಪಾಕಿಸ್ತಾನಿ ಚಾಲಕರು ದುಡ್ಡೇ ತೆಗೆದುಕೊಳ್ಳುವುದಿಲ್ಲ ಎಂಬಷ್ಟೂ ಅವರ ಖ್ಯಾತಿ!

ಎಸ್.ಡಿ.ಬರ್ಮನ್‌ರಿಂದ ಹಿಡಿದು ಶಂಕರ್–ಎಹ್ಸಾನ್–ಲಾಯ್‌ವರೆಗೆ ಬಹುತೇಕ ಹಿಂದೀ ಸಂಗೀತ ನಿರ್ದೇಶಕರಿಗೆ ಹಾಡು ಬರೆದುಕೊಟ್ಟವರು ಗುಲ್ಜಾರ್. ನಟಿ ರಾಖಿ ಜತೆಗಿನ ಅವರ ಮದುವೆ ಹೆಚ್ಚು ಕಾಲ ಬಾಳಲಿಲ್ಲ. ಇಬ್ಬರೂ ಬೇರ್ಪಟ್ಟಾಗ ಮಗಳು ಮೇಘನಾಗೆ ಇನ್ನೂ ಒಂದು ವರ್ಷ! ಮಗಳು ತಂದೆಯ ಜತೆಗೇ ಬೆಳೆದಳು. ತಂದೆಯಂತೆಯೇ ಒಳ್ಳೆಯ ಸಿನಿಮಾಗಳನ್ನು ನಿರ್ದೇಶಿಸಿದಳು. ಗುಲ್ಜಾರ್ ನಿರ್ದೇಶಿಸಿದ ಚಿತ್ರಗಳೂ ಸದಾ ಸ್ಮರಣೀಯ. ಪರಿಚಯ್, ಅಂಗೂರ್ ಮುಂತಾಗಿ ಹಾಸ್ಯಚಿತ್ರಗಳಿಂದ ಹಿಡಿದು ಆಂಧಿ, ಮಾಚಿಸ್, ಹು ತು ತು ಮುಂತಾದ ರಾಜಕೀಯ ಚಿತ್ರಗಳವರೆಗೆ ಗುಲ್ಜಾರ್ ವ್ಯಾಪ್ತಿ ವಿಸ್ತಾರ. ಟಿ.ವಿಯಲ್ಲಿ ಬಂದ ಮಿರ್ಜಾ ಘಾಲಿಬ್ ಸೀರಿಯಲ್ ಇನ್ನೊಂದು ಬಗೆ. ಲತಾ ದೀದಿಯ ಸಿರಿಕಂಠದಲ್ಲಿ ಬಂದ 'ತುಜ್‌ಸೆ ನಾರಾಝ್ ನಹೀ ಜಿಂದಗೀ' ಎನ್ನುವ ಹಾಡಿನಿಂದ ಹಿಡಿದು, 'ಬಂಟೀ ಔರ್ ಬಬ್ಲೀ'ಯ 'ಕಜ್ರಾ ರೇ' ಹಾಡಿನವರೆಗೆ ಗುಲ್ಜಾರ್ ಬರೆದದ್ದೆಲ್ಲವೂ ವೈವಿಧ್ಯಮಯ. ಹಾಗೆಂದೇ ಆಸ್ಕರ್, ಪದ್ಮಭೂಷಣ, ಸಾಹಿತ್ಯ ಅಕಾಡೆಮಿ, ಗ್ರಾಮ್ಮೀ ಪ್ರಶಸ್ತಿಗಳು ಹುಡುಕಿಕೊಂಡು ಬಂದವು. ಈಗ ಅರ್ಹವಾಗಿಯೇ ಫಾಲ್ಕೆ ಬಂದಿದೆ.



## ಸಚಿನ್ ಕಾಲ್ಗುಣ

ಭಾರತದ ಕ್ರೀಡಾರಂಗದಲ್ಲಿ ಕ್ರಿಕೆಟ್‌ನದ್ದು ಎಂತಹ ದೈತ್ಯ ಹೆಜ್ಜೆಯೆಂದರೆ, ಅದರ ಹೊಡೆತಕ್ಕೆ ಬೇರೆಲ್ಲಾ ಕ್ರೀಡೆಗಳೂ ನುಜ್ಜುಗುಜ್ಜಾಗಿವೆ. ಇಂತಹ ಸಂದರ್ಭದಲ್ಲಿ ಕ್ರಿಕೆಟ್ ಲೋಕದ ದೈತ್ಯ ಆಟಗಾರ ಸಚಿನ್ ತೆಂಡೂಲ್ಕರ್, ಫುಟ್‌ಬಾಲ್ ಕ್ಲಬ್‌ಅನ್ನು ಖರೀದಿಸಿ ತಮ್ಮ ಸದ್ಗುಣವನ್ನು ಮೆರೆದಿದ್ದಾರೆ. ಸೆಪ್ಟಂಬರ್‌ನಿಂದ ಎರಡು ತಿಂಗಳು ದೇಶಾದ್ಯಂತ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭಾಗವಹಿಸಲಿರುವ ಎಂಟು ತಂಡಗಳಲ್ಲಿ ಒಂದಾದ ಕೊಚ್ಚಿ ಫುಟ್‌ಬಾಲ್ ಕ್ಲಬ್ ತಂಡಕ್ಕೆ ಈಗ ಸಚಿನ್ ಫ್ರಾಂಚೈಸಿ. ಜತೆಗೆ ಪಿವಿಪಿ ವೆಂಚರ್ಸ್ ಸಹಭಾಗಿ. 10 ವರ್ಷಕ್ಕೆ ಒಂದು ತಂಡದ ಫ್ರಾಂಚೈಸಿ ಅಂದರೆ ಕನಿಷ್ಠ ಎರಡೂವರೆ ಕೋಟಿ ಡಾಲರ್ ಹಣ ಹೂಡಿಕೆ. ಸಚಿನ್‌ರದ್ದು ಇದರಲ್ಲಿ ಅರ್ಧ ಪಾಲು.

ನೋಡಲು ಕೇರಳದ ಜನರಷ್ಟೇ ಎತ್ತರವಿರುವ ಸಚಿನ್, ಕೊಚ್ಚಿ ತಂಡಕ್ಕೆ ಹಣ ಹಾಕುವ ಮೂಲಕ ಹಣಕಾಸಿನ ಕೊರತೆಯಿಂದ ನೆಲಕಚ್ಚಿರುವ ಕೇರಳ ಫುಟ್‌ಬಾಲ್‌ಗೆ ಶಕ್ತಿ ತುಂಬುವುದು ಖಚಿತ. 22 ಆಟಗಾರರ ತಂಡದಲ್ಲಿ 4 ಕೊಚ್ಚಿ ಆಟಗಾರರಿಗೆ ಅವಕಾಶವಿದೆ. ಜತೆಗೆ ಕೊಚ್ಚಿಯಲ್ಲಿ ತಳಮಟ್ಟದಲ್ಲಿ ಫುಟ್‌ಬಾಲ್ ಆಟಕ್ಕೆ ಜೀವ ತುಂಬಲು 2 ಕೋಟಿ ರೂಪಾಯಿ ಖರ್ಚು ಮಾಡಬೇಕು. 5 ವರ್ಷದೊಳಗೆ ಅಲ್ಲೊಂದು ಫುಟ್‌ಬಾಲ್ ಅಕಾಡೆಮಿ ಸ್ಥಾಪಿಸಬೇಕು. ಪ್ರತಿವರ್ಷ ಫುಟ್‌ಬಾಲ್ ಮೂಲಸೌಲಭ್ಯಕ್ಕೆ 12 ಕೋಟಿ ರೂಪಾಯಿ ನೆರವು ನೀಡಬೇಕು. ಫುಟ್‌ಬಾಲ್ ಎಂದರೆ ಕೇರಳದಲ್ಲಿ ಊರಿಗೆ ಊರೇ ಮೈದಾನಕ್ಕೆ ಗುಳೇ ಹೋಗುವ ಪರಿಪಾಠವುಂಟು. ಜತೆಗೆ ಸಚಿನ್ ಕಾಲ್ಗುಣವೂ ಸೇರಿದರೆ ಮಲಯಾಳಿಗಳ ಸಂಭ್ರಮಕ್ಕೆ ಪಾರವೇ ಇರಲಿಕ್ಕಿಲ್ಲ. ಸಚಿನ್ ಮತ್ತು ಸೌರವ್ ಗಂಗೂಲಿಯಂತೆ ಉಳಿದ ಕ್ರಿಕೆಟಿಗರೂ ಬೇರೆ ಬೇರೆ ಕ್ರೀಡೆಗಳಲ್ಲಿ ಹಣ ಹೂಡಿದರೆ ಭಾರತೀಯ ಕ್ರೀಡಾಲೋಕ ಸಾಧನೆಯಲ್ಲಿ ಮೇರುಗಿರಿಗೆ ಏರಬಹುದು. ●

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65